ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ ನನ್ನದೊಂದು ಪ್ರಶ್ನೆಯನ್ನು ತಡೆಹಿಡಿದಿದ್ದೀರಿ. ಈಗ ಮಂತ್ರಿಗಳು ಇಲ್ಲಿದ್ದಾರೆ.

ಅಧ್ಯಕ್ಷರು: ತಡೆಹಿಡಿದಿರುವ ಪ್ರಶ್ನೆಗಳಿಗೆ ಸುಮಾರು 10-15 ಉತ್ತರಗಳು ರೆಡಿ ಇವೆ. ಸೋಮವಾರದಿಂದ ಪ್ರತಿದಿವಸ ಅದನ್ನು ತೆಗೆದುಕೊಳ್ಳೋಣ. ಈಗೊಂದು ಪ್ರಕಟಣೆ ಇದೆ.

3. ಪ್ರಕಟಣೆ

ಮಾನ್ಯ ಸಭಾಧ್ಯಕ್ಷರು:

ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ದಿನಾಂಕ 19-04-2000 ದಂದು ವಿಧಾನಪರಿಷತ್ತು 'ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2000' ವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿದ್ದು, ವಿಧಾನಸಭೆಯ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

4. ಅಧ್ಯಕ್ಷರ ಅಪ್ಪಣೆ ಮೇರೆಗೆ: ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಂದುವರಿಸುವ ಬಗ್ಗೆ:

ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ನಮಗೆ ಸಮಯ ಹೆಚ್ಚಾಗಿ ಬೇಕಾಗಿರುವುದರಿಂದ ಇವತ್ತು ನಾನು ಯಾವುದೇ ಶೂನ್ಯವೇಳೆಯನ್ನು ತೆಗೆದುಕೊಳ್ಳುವುದಿಲ್ಲ. ಶೂನ್ಯ ವೇಳೆಗೆ ಸಂಬಂಧಿಸಿದಂತೆ ಬೇಕಾದಷ್ಟು ಬಂದಿವೆ. ಅದಕ್ಕೆ ಉತ್ತರಗಳೂ ಬಂದಿವೆ. ಅವುಗಳನ್ನು ಸೋಮವಾರದಿಂದ ದಿನವೂ ಐದೈದು ಹಾಕಿಕೊಂಡು ಮಾಡೋಣ. ಈಗ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಶುರುಮಾಡಬೇಕು.

+ಶ್ರೀ ಜಗದೀಶ್ ಶೆಟ್ಟರ್: (ಮಾನ್ಯ ವಿರೋಧ ಪಕ್ಷದ ನಾಯಕರು) ಇವತ್ತು ನಿಯಮ 69 ಕೂಡ ಇದೆ. ಅದು ಕುಡಿಯುವ ನೀರಿನ ಬಗ್ಗೆ ಸಂಬಂಧಿಸಿದ್ದು ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ಒಂದು ಸಾರಿ ಪ್ರಾರಂಭವಾದರೆ ಅದಕ್ಕೆ ಮುಕ್ತಾಯವಿಲ್ಲ. ನಿಯಮ 69ರ ಬಗ್ಗೆ ಕುಡಿಯುವ ನೀರಿಗೆ ಸಂಬಂಧಿಸಿದಂತಹ ವಿಷಯಕ್ಕೆ ಅವಕಾಶ ಇಲ್ಲದಂತಾಗುತ್ತದೆ.

MR. Speaker: It is not good on our part if we delay the discussion on the Governor's Address.

ನಿನ್ನೆ ತಾವು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಮಾನ್ಯ ಸಿಂಧ್ಯಾರವರು ಒಳಗಡೆ ಹೋಗಿ ಮಾತನಾಡಿಕೊಂಡು ಬಂದಿದ್ದೀರಿ, ಇವತ್ತು ರಾಜ್ಯಪಾಲರ ಭಾಷಣ ತೆಗೆದುಕೊಳ್ಳೋಣ ಎಂದು ತೀರ್ಮಾನವಾಗಿದೆ.

ಶ್ರೀ ಜಗದೀಶ್ ಶೆಟ್ಟರ್: ಈಗ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿ, ಅದನ್ನು ಮುಗಿಸಿದಮೇಲೆ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ಅದನ್ನು ನೀವು ಮುಗಿಸುವುದಿಲ್ಲ. ಈ ಕುಡಿಯುವ ನೀರಿನ ಸಮಸ್ಯೆ ಎಂದರೆ ಕಡಿಮೆ ಎಂದರೂ 50 ಜನರು ಮಾತನಾಡುತ್ತಾರೆ. ನಾನು ಅದಕ್ಕಾಗಿ ಯಾರನ್ನೂ ತಡೆಹಿಡಿಯುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ಈ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳದಿದ್ದರೆ ತೊಂದರೆಯಾಗುತ್ತದೆ. ರಾಜ್ಯದ ಎಲ್ಲಾ ಕಡೆಗಳಲ್ಲಿ ಈ ಕುಡಿಯುವ ನೀರಿನ ಬಗ್ಗೆ ಹಾಹಾಕಾರ ಎದ್ದಿದೆ. ಈ ವಿಚಾರದಲ್ಲಿ ಎಷ್ಟೋ ಜಿಲ್ಲೆಗಳಿಗೆ ಹಣ ಬಿಡುಗಡೆಯಾಗಿಲ್ಲ. ಜನರು ಹಾಹಾಕಾರದಿಂದ ಬಳಲುತ್ತಿದ್ದಾರೆ. ಅಲ್ಲೆಲ್ಲಾ ಅತ್ಯಂತ ಗಂಭೀರವಾದ ಪರಿಸ್ಥಿತಿ ಇರುವ ಸಂದರ್ಭದಲ್ಲಿ ಇದನ್ನು ಪ್ರಸ್ತಾಪಮಾಡುವುದಕ್ಕೆ ಎರಡು-ಮೂರು ದಿವಸದಿಂದ ನಾನು ಪ್ರಯತ್ನ ಮಾಡುತ್ತಿದ್ದರೂ ಅದು ಸಾಧ್ಯ ಆಗುತ್ತಿಲ್ಲ. ನಿನ್ನೆ ಅದಕ್ಕಾಗಿಯೇ ನಾವು ಕೋ-ಆಪರೇಟಿವ್ ಬಿಲ್ ಬಿಟ್ಟು ಇದನ್ನು ತೆಗೆದುಕೊಳ್ಳಿ ಎಂದರೂ ಆ ಬಿಲ್ಲನ್ನೇ ತೆಗೆದುಕೊಂಡಿರಿ. ಸದನ ಇದರ ಬಗ್ಗೆ ಗಮನ ಕೊಡುತ್ತಿಲ್ಲ. ಚರ್ಚೆ ಆಗುತ್ತಿಲ್ಲ ಎನ್ನುವ ಭಾವನೆ ಜನರಲ್ಲಿ ಬರುತ್ತದೆ. ಸರ್ಕಾರ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ, ಇವತ್ತು ಬೇರೆ ಬೇರೆ ನಗರಗಳಲ್ಲಿ, ಗ್ರಾಮಗಳಲ್ಲಿ ಏನು ಪರಿಸ್ಥಿತಿ ಇದೆ, ಇದರ ಬಗ್ಗೆ ಚರ್ಚೆ ಮಾಡಬೇಕಾಗುತ್ತದೆ. ಸರ್ಕಾರ ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ: ಕುಡಿಯುವ ನೀರಿನ ಬಗ್ಗೆ ಚರ್ಚೆಮಾಡಲು ಆದ್ಯತೆ ಕೊಡಿ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಬಗ್ಗೆ ಚರ್ಚೆಯನ್ನು ತಡೆಯಬೇಕೆನ್ನುವ ಉದ್ದೇಶ ಸರ್ಕಾರಕ್ಕಿಲ್ಲ. ಸಾಕಷ್ಟು ಮಾಹಿತಿ ಅಲ್ಲಿಂದ ಬಂದರೆ ಪರಿಹಾರವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಇಲ್ಲಿ ನಾವು ಲಿಸ್ಟ್ ಆಫ್ ಬಿಸಿನೆಸ್ ಪ್ರಕಾರ ಹೋಗಬೇಕು. ಇದನ್ನು ಮೊದಲೇ ತೆಗೆದುಕೊಳ್ಳಿ ಎಂದ ತಕ್ಷಣವೇ ಮತ್ತೆ ಮಂತ್ರಿಗಳು ಇಲ್ಲ ಎನ್ನುತ್ತೀರಿ. ಬಿಸಿನೆಸ್ ತೆಗೆದುಕೊಳ್ಳುವಾಗ ಮಂತ್ರಿಗಳು ಏಕೆ ಇರಬೇಕು, ಏಕೆ ಇಲ್ಲ ಎಂದು ನಿರ್ಧಾರ ಮಾಡುವವರು ತಾವು. ಈಗ ಅಲ್ಪಕಾಲಾವಧಿ ಚರ್ಚೆಯನ್ನು ಸಾಯಂಕಾಲವೂ ತೆಗೆದುಕೊಳ್ಳಬಹುದು. ಎರಡೂ ಸದನಗಳು ಒಟ್ಟಿಗೆ ನಡೆಯುತ್ತಿವೆ. ಇದರ ಜೊತೆಗೆ ಮಾನ್ಯ ಸಿಂಧ್ಯಾರವರು ಒಂದು ವಿಷಯದ ಬಗ್ಗೆ ಚರ್ಚೆ ಮಾಡಬೇಕೆಂದು ಕಳುಹಿಸಿದ್ದರು. ಅದೇನಾಯಿತೋ ಗೊತ್ತಿಲ್ಲ. ಲಿಸ್ಟ್ ಆಫ್ ಬಿಸಿನೆಸ್‌ನಲ್ಲಿ ಹಾಕಿದಾಗ ನೋಡಬೇಕು. ಆ ಲಿಸ್ಟ್ ಆಫ್ ಬಿಸಿನೆಸ್‌ನ್ನು ನೋಡಿಕೊಂಡು ಮಾನ್ಯ ಮಂತ್ರಿಗಳು ರಾಜ್ಯಪಾಲರ ಭಾಷಣ ಮುಗಿದ ಮೇಲೆ ಆ ಸಬ್ಜೆಕ್ಟ್ ಬರುತ್ತದೆ ಎಂದು ಹೋಗಿದ್ದಾರೆ. ನೀವು ಅದನ್ನು ಈಗಲೇ ತೆಗೆದುಕೊಂಡರೆ ನಮ್ಮದೇನೂ ಅಭ್ಯಂತರವಿಲ್ಲ. ಅವರನ್ನು ಕರೆಸಬೇಕಾಗುತ್ತದೆ. ಅವರು ನಮ್ಮನ್ನು ಕೇಳಿಕೊಂಡು ಹೋಗಿದ್ದಾರೆ.

ಅಧ್ಯಕ್ಷರು: ಹಾಗಾದರೆ ಒಂದು ಕೆಲಸ ಮಾಡೋಣ. ಸಂಬಂಧಪಟ್ಟ ಆರ್‌ಡಿಪಿಆರ್ ಮಂತ್ರಿಗಳು ಬಹುಶಃ ಆ ಮನೆಯಲ್ಲಿರಬಹುದು. ಅವರು ಕೇಳಿಕೊಂಡು ಹೋಗಿದ್ದಾರೆ. ಈಗ ಐದು ನಿಮಿಷದಲ್ಲಿ ಬಿಎಸಿ ಮೀಟಿಂಗ್ ನಡೆಸೋಣ. ಯಾವ ಸಬ್ಜೆಕ್ಟ್ ತೆಗೆದುಕೊಳ್ಳಬೇಕೋ ಅಲ್ಲಿ ಏನು ಡಿಸೈಡ್ ಆಗುತ್ತದೋ ಆ ರೀತಿ ಮಾಡೋಣ. ಈಗ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಶುರುಮಾಡಲಿ. ಬೇಕಾದರೆ ಆ ನಂತರ ಮಧ್ಯೆ ಅದನ್ನು ಮೊಟಕು ಮಾಡಿ ಕುಡಿಯುವ ನೀರಿನ ಬಗ್ಗೆ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್: ಆ ಇಲಾಖೆಗೆ ಇಬ್ಬರು ಸಚಿವರಿದ್ದಾರೆ. ಒಬ್ಬರು ಇಲ್ಲಿ ಕುಳಿತುಕೊಳ್ಳಬಹುದಲ್ಲ.

ಶ್ರೀ ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಕೋಲಾರದ ಬಗ್ಗೆ ಹೇಳಿಕೆ ಮಾಡಿಸುತ್ತೇನೆ ಎಂದು ಹೇಳಿದ್ದೀರಿ, ಈಗ ಮಂತ್ರಿಗಳು ತಯಾರಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ: 'As per the list of Business' ಕುಡಿಯುವ ನೀರಿನ ವಿಚಾರ ಕೊನೆಯಲ್ಲಿದೆ. ಸಂಬಂಧಪಟ್ಟ ಮಾನ್ಯ ಮಂತ್ರಿಗಳು ನನ್ನನ್ನು ಕೇಳಿದರು, ಈ ಚರ್ಚೆಯನ್ನು ಮಧ್ಯಾಹ್ನದ ಮೇಲೆ ತೆಗೆದುಕೊಳ್ಳಬಹುದು ಎಂದು ನಾನು ಹೇಳಿದೆ.

ಅಧ್ಯಕ್ಷರು: ಅರ್ಬನ್, ರೂರಲ್ ವಾಟರ್ ಬಗ್ಗೆ ಒಂದೊಂದು ಸಲ ಮಾತನಾಡುವುದು ಸರಿ ಇರುವುದಿಲ್ಲ. ಈಗ ಐದು ನಿಮಿಷದಲ್ಲಿ ತೀರ್ಮಾನ ಮಾಡೋಣ. ಅರ್ಬನ್ ಮಂತ್ರಿಗಳಿದ್ದಾರೆ. ಅದನ್ನು ನಾನು ಒಪ್ಪಿಕೊಂಡೆ. ಇದೊಂದು ಸಲ ಅದೊಂದು ಸಲ ಮಾತನಾಡುವುದಕ್ಕಾಗುವುದಿಲ್ಲ. ಎರಡನ್ನೂ ಜೊತೆಯಲ್ಲಿ ಸೇರಿಸಿ ಮಾತನಾಡಬೇಕಾಗುತ್ತದೆ.

ಶ್ರೀ ಸಿ.ಬೈರೇಗೌಡ: ಕೋಲಾರದಲ್ಲಿ ಕೆರೆ ಹೂಳೆತ್ತುವ ಬಗ್ಗೆ ಹೇಳಿಕೆಯನ್ನು ನಾಳೆ ಮಾಡಿಸುತ್ತೇನೆಂದು ಹೇಳಿದ್ದೀರಿ. ಈಗ ಮಾನ್ಯ ಮಂತ್ರಿಗಳು ಹೇಳಿಕೆ ಮಾಡುವುದಕ್ಕೆ ತಯಾರಿದ್ದಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟೆ: ಮಾನ್ಯ ಅಧ್ಯಕ್ಷರೇ, ನಿನ್ನೆ ಹೇಳಿಕೆ ಮಾಡಬೇಕು ಎಂದು ರಾತ್ರಿ ಎಂಟು ಗಂಟೆಯವರೆಗೆ ನಿಮ್ಮ ಸಲುವಾಗಿ ಕಾಯುತ್ತಿದ್ದೆ.

ಶ್ರೀ ಡಿ.ಬಿ. ಚಂದ್ರೇಗೌಡ: ಎಂಟು ಗಂಟೆಯವರೆಗೆ ಕಾದರೂ ಮಾನ್ಯ ಸದಸ್ಯರು ಇಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ದಯವಿಟ್ಟು ಶ್ವೇತ ಪತ್ರದ ಮೇಲೆ ವಿವರವಾದ ಚರ್ಚೆ ಆಗಲಿ ಎಂದು ಹೇಳಿದ್ದೆ. ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ, ಹೇಳುತ್ತೇವೆ ಎಂದಿದ್ದರು. ಈ ದಿವಸ ಮಾನ್ಯ ಮುಖ್ಯಮಂತ್ರಿಗಳು ಇರುವುದರಿಂದ ಇದರ ಬಗ್ಗೆ ಸಹ ಅವರು ಹೇಳಬೇಕು.

ಅಧ್ಯಕ್ಷರು: ಅದರ ಬಗ್ಗೆ ಬಿಎಸಿ ಮೀಟಿಂಗ್‌ನಲ್ಲಿ ಮಾತನಾಡೋಣ

4. ಗಮನ ಸೆಳೆಯುವ ಸೂಚನೆ:

:ಕೋಲಾರದ ನೀರಿನ ಸಮಸ್ಯೆ:

ಶ್ರೀ ಕೆ. ಶ್ರೀನಿವಾಸಗೌಡ: ಕುದವನಹಳ್ಳಿ (ಕೋಲಾರ): ಮಾನ್ಯ ಅಧ್ಯಕ್ಷರೇ, 'ಕೋಲಾರದ ನೀರಿನ ಸಮಸ್ಯೆ ಕುರಿತು ನಾನು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ"

+ಶ್ರೀ ಬಿ.ಬಿ. ಚಿಮ್ಮನಕಟ್ಟೆ: ಮಾನ್ಯ ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಪಡೆದು ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

ಕೋಲಾರ ನಗರಕ್ಕೆ ಒಂದು ಹೊಸ ನೀರು ಸರಬರಾಜು ಯೋಜನೆಯನ್ನು ತಯಾರಿಸಿ, ಈ ಯೋಜನೆಯಡಿಯಲ್ಲಿ 'ಅಮ್ಮೇರಹಳ್ಳಿ' ಮತ್ತು 'ಮಡೇರಹಳ್ಳಿ' ಕೆರೆಗಳಲ್ಲಿ ಹೂಳೆತ್ತುವ ಕೆಲಸಕ್ಕೆ ಆಗುವ ವೆಚ್ಚವನ್ನು ಸೇರಿಸಲಾಗುವುದು. ಈ ತರಹ ತಯಾರಿಸುವ ಅಂದಾಜು ಹುಡ್ಕೋ ಅಥವಾ ಎಲ್.ಐ.ಸಿ.ನಿಂದ ಹಣ ಪಡೆದು ಕಾರ್ಯಗತ ಮಾಡಲು ಪರಿಶೀಲಿಸಲಾಗುವುದು. ಹಾಗೂ ಈ ಎರಡೂ ಕೆರೆಗಳ ಹೂಳೆತ್ತುವ ಕೆಲಸಕ್ಕೆ ಸುಮಾರು ರೂ. ಒಂದು ಕೋಟಿಗಳಿಗಿಂತ ಹೆಚ್ಚು